**ಸಾಕ್ಷಿಯನ್ನು ದಿಃ03.04.2018 ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ 1 ರಿಂದ 6 ಹಾಗೂ 8 ರಿಂದ 12ನೇ ಪ್ರತಿವಾದಿಗಳ ಪರ ಶ್ರೀ ಹೆಚ್.ಎಂ.ವಿ ವಕೀಲರಿಂದಃ**

2ನೇ ಪ್ರತಿವಾದಿಯ ಹೆಂಡತಿ ಸರ್ಕಾರಿ ಶಿಕ್ಷಕರಾಗಿ 1981ರಲ್ಲಿ ನೇಮಕವಾಗಿರುತ್ತಾರೆ ಎಂದರೆ ಸರಿ. 1987ರ ತನಕ ಶ್ರೀನಿವಾಸಪುರದಲ್ಲಿ ಕೆಲಸ ಮಾಡುತ್ತಿದ್ದು ತದನಂತರ ಬಂಗಾರಪೇಟೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಅನುಸೂಚಿ 5ನ್ನು 1993ರಲ್ಲಿ 2ನೇ ಪ್ರತಿವಾದಿ ಕೊಂಡುಕೊಂಡಾಗ ಆತನ ಹೆಂಡತಿ ಬಂಗಾರಪೇಟೆಯಲ್ಲಿ ಸರ್ಕಾರಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2008-09ನೇ ಸಾಲಿನಲ್ಲಿ ಸದರಿ ಆಸ್ತಿಯಲ್ಲಿ 2ನೇ ಪ್ರತಿವಾದಿಯು ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿ. ಸದರಿ ಸಮಯದಲ್ಲಿ 2ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಬೂದಿಕೋಟೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಕಟ್ಟಿದ ಮನೆಯ ಬೆಲೆ ಸುಮಾರು 24 ಲಕ್ಷ ಇರಬಹುದು.

ದಾವಾ ಆಸ್ತಿ 1 ರಿಂದ 4ರಲ್ಲಿ ಕಾಣಿಸಿರುವ ಆಸ್ತಿಗಳು 1 ಗುಂಟೆ ಜಮೀನಿಗೆ 40 ರಿಂದ 50 ಸಾವಿರ ಬೆಲೆ ಬಾಳಬಹುದು. 1998ನೇ ಸಾಲಿನಿಂದ 3ನೇ ಪ್ರತಿವಾದಿ ಪ್ರತ್ಯೇಖವಾಗಿ ವಾಸಮಾಡುತ್ತಿದ್ದಾರೆ. ವೈಯುಕ್ತಿಕವಾಗಿ ಯಾವುದೇ ಆಸ್ತಿಯನ್ನು 3ನೇ ಪ್ರತಿವಾದಿ ಸಂಪಾದನೆ ಮಾಡಿರುವುದಿಲ್ಲ.

ಪ್ರತಿವಾದಿ 8 ರಿಂದ 12ರವರ ತಂದೆ ವೆಂಕಟೇಶಪ್ಪನವರು 1998ರಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರು 1990ನೇ ಸಾಲಿನಿಂದ ಬೇರೆಯಾಗಿ ವಾಸವಿರುತ್ತಾರೆ. 5ನೇ ಪ್ರತಿವಾದಿಯ ವಿವಾಹವಾಗಿ 30 ರಿಂದ 35 ವರ್ಷ ಕಳೆದಿರುತ್ತದೆ. ಸದರಿಯವರು ಆಕೆಯ ಗಂಡನ ಊರಾದ ಜಾನಗುಟ್ಟೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಅದೇ ರೀತಿ 6 ಮತ್ತು 7ನೇ ಪ್ರತಿವಾದಿಗಳು ಸಹಾ ಮದುವೆಯಾದ ನಂತರ ಅವರ ಅವರ ಗಂಡನ ಊರುಗಳಲ್ಲೇ ವಾಸವಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿಯು ಸೂಲಿಕುಂಟೆ ಗ್ರಾಮದಲ್ಲಿ ವಾಸವಾಗಿರುತ್ತಾರೆಂದು ತೋರಿಸಲು ನ್ಯಾಯಾಲಯಕ್ಕೆ ನಾನು ದಾಖಲೆಯನ್ನು ಕೊಟ್ಟಿರುತ್ತೇನೆ. ಅಸಲು ದಾವೆ ಸಂಖ್ಯೆ:207/2011ರಲ್ಲಿ ಕಾಣಿಸಿದ ದಾವಾ ಆಸ್ತಿ 1ನ್ನು ಕೊಂಡುಕೊಳ್ಳುವ ಸಮಯದಲ್ಲಿ ನನಗೆ 2

ವರ್ಷ ವಯಸ್ಸು ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ ಎಂದು ನುಡಿದಿರುತ್ತಾರೆ.

ನನ್ನ ತಾಯಿ ಮುನಿಲಕ್ಷ್ಮಮ್ಮನವರಿಗೆ ಸಕ್ಕರೆ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಮುನಿಲಕ್ಷ್ಮಮ್ಮನವರು ಕಾಲನ್ನು ಮುರಿದುಕೊಂಡ ಕಾರಣ ಮಾರ್ಚ್ 2002ರಂದು ಆಸ್ಪತ್ರೆಗೆ ದಾಖಲಾಗಿರುತ್ತಾರೆ ಎಂದರೆ ಸರಿ. ಆಸ್ಪತ್ರೆಯಲ್ಲಿ 20 ದಿನಗಳ ಕಾಲ ಒಳರೋಗಿಯಾಗಿದ್ದರು. ಸದರಿಯವರು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಅವರಿಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ:207/2011ರಲ್ಲಿ ಕಾಣಿಸಿರುವ ದಾವಾ ಆಸ್ತಿ 1ಕ್ಕೆ ಸಂಬಂಧಪಟ್ಟಂತೆ ನನ್ನ ತಾಯಿ ನನಗೆ ಯಾವುದೇ ವಿಲ್‌ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಕಾಣಿಸಿರುವ 1 ಮತ್ತು 2ನೇ ಆಸ್ತಿ ಹಾಗೂ ಅಸಲು ದಾವೆ ಸಂಖ್ಯೆ:207/2011ರಲ್ಲಿ ಕಾಣಿಸಿರುವ 1 ಮತ್ತು 2ನೇ ಆಸ್ತಿಗಳು ಒಟ್ಟು ಕುಟುಂಬಂದ ಆಸ್ತಿಗಳು ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ಕುಟುಂಬದ ಎಲ್ಲಾ ಸದಸ್ಯರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಪಾಟೀಸವಾಲು: 13ನೇ ಪ್ರತಿವಾದಿ ಪರ ಶ್ರೀ ಕೆ.ವಿ.ಪಿ ವಕೀಲರಿಂದ:**

13ನೇ ಪ್ರತಿವಾದಿಯು ನಮ್ಮ ಕುಟುಂಬದ ಸದಸ್ಯರಲ್ಲ ಎಂದರೆ ಸರಿ. ದಾವಾ ಅನುಸೂಚಿ 4ಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಕಿರುತ್ತೇನೆ. ಸದರಿ ಆಸ್ತಿಯು 13ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದ್ದು ಅವರೇ ಅದರಲ್ಲಿ ಸ್ವಾಧೀನದಲ್ಲಿರುತ್ತಾರೆ. ಸದರಿ ಆಸ್ತಿಯಲ್ಲಿ 2015ನೇ ಸಾಲಿನಿಂದ 13ನೇ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾರೆ. ಸದರಿ ಆಸ್ತಿಯಲ್ಲಿ ಮನೆಯನ್ನು 13ನೇ ಪ್ರತಿವಾದಿ ಕಟ್ಟಿರುತ್ತಾರೆ ಆದರೆ ಅದಕ್ಕೆ ಬೇಸ್‌ಮೆಂಟ್‌ನ್ನು ನನ್ನ ತಂದೆಯವರು ಹಾಕಿರುತ್ತಾರೆ. ಸದರಿ ಮನೆಯ ಪೂರ್ವಕ್ಕೆ ಮುನಿಯಪ್ಪನ ಮನೆ, ಪಶ್ಚಿಮಕ್ಕೆ ವೆಂಕಟಪ್ಪನ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ರಸ್ತೆ ಬರುತ್ತದೆ. ಸದರಿ ಆಸ್ತಿಯ ಬಗ್ಗೆ ಚೆಕ್ಕುಬಂದಿಯನ್ನು ನಾನು ತಪ್ಪಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು 13ನೇ ಪ್ರತಿವಾದಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. 13ನೇ ಪ್ರತಿವಾದಿಯು ಸದರಿ ಆಸ್ತಿಯಲ್ಲಿ 2008ನೇ ಸಾಲಿನಿಂದ ಮನೆಯನ್ನು ಕಟ್ಟಿಕೊಂಡು ವಾಸವಿದ್ದಾರೆ

ಎಂದರೆ ಸರಿ. 13ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಯಾವುದೇ ಸಂಬಂಧವಿಲ್ಲದಿದ್ದರೂ ದಾವೆ ಆಸ್ತಿ 4ನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**
**ಪ್ರಭಾರ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**